Sri B. L. GOWDA:—No, Sir.

Sri B. P. GANGADHAR.—Do the Government concede that it is due to the inefficiency of the Department ?

Sri B. L. GOWDA.—No, Sir.

Constitution of a Development Board

10. Sri B. L. NARAYANASWAMY (Srinivasapur).—

Will the Minister for Development be pleased to state :—

(*a*) whether it is a fact that the District Development Council, Kolar has passed a resolution requesting the Government for constituting a Development Board on the lines of the one set up by the Andhra State for improving the ceded District ;

(*b*) if so, the action taken by the Government to comply with the resolution ;

(*c*) whether the proposed Board would be constituted to function from the coming year ?

Sri B. L. GOWDA (Deputy Minister for Co-operation).—

(*a*) Yes.

(*b*) Still under consideration.

(*c*) Does not arise in view of the reply to clause (*b*) above.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ನಿರ್ಣಯ ಸರ್ಕಾರಕ್ಕೆ ಬಂದು ಎಷ್ಟು ಕಾಲ ವಾಯಿತು, ಸ್ವಾಮಿ ?

†ಶ್ರೀ ಬಿ. ಎಲ್. ಗೌಡ.—ಒಂದು ವರ್ಷವಾಯಿತು.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಇದರ ಪರಿಶೀಲನೆಗೆ ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಬಿ. ಎಲ್. ಗೌಡ.—ಆಂಧ್ರಪ್ರದೇಶದವರು ಮಾಡಿರತಕ್ಕ ಒಂದು ಯೋಜನೆ ಬಗ್ಗೆ ಕೋಲಾರ ಜಲ್ಲಾಭಿವೃದ್ಧಿ ಮಂಡಲ ಪ್ರಸ್ತಾಪಿಸಿ ಅಂಥದೇ ಯೋಜನೆ ಇಲ್ಲಿಯೂ ಬರಬೇಕಾಗಿದೆ, ಕ್ಷಾಮಕ್ಕೆ ತುತ್ತಾಗತಕ್ಕ ಪ್ರದೇಶಗಳಿಗೆ ಸಂಬಂಧಪಟ್ಟಂತೆ ಒಂದು ಬೋರ್ಡನ್ನು ರಚನೆ ಮಾಡ ಬೇಕೆಂದು ಸಲಹೆ ಮಾಡಿದ್ದರು. ಸರ್ಕಾರಕ್ಕೆ ನಿರ್ಣಯ ಬಂದ ತಕ್ಷಣ ಆಂಧ್ರಪ್ರದೇಶ ಸರ್ಕಾರಕ್ಕೆ ಬರೆದು ವಿವರಗಳನ್ನು ತರಿಸಿಕೊಂಡು ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ.

ಶ್ರೀ ಬಿ. ಎಲ್. ನಾರಾಯಣಸ್ವಾಮಿ.—ಕೋಲಾರ ಜಿಲ್ಲೆಯ ವಿಚಾರ ಸರ್ಕಾರಕ್ಕೆ ಚೆನ್ನಾಗಿ ತಿಳಿದಿರುವ ಕಾರಣ ಸಾಧ್ಯವಾದಷ್ಟು ಬೇಗನೆ ಒಂದು ಮಂಡಲಿಯನ್ನು ಮಾಡಿಸುತ್ತಾರೆಯೇ ?

ಶ್ರೀ ಬಿ. ಎಲ್. ಗೌಡ.—ಮೈಸೂರು ರಾಜ್ಯದಲ್ಲಿ ಕೋಲಾರ, ಚಿತ್ರದುರ್ಗ, ಬಳ್ಳಾರಿ, ಬಿಜಾಪುರದ ಕೆಲವು ಭಾಗಗಳು ಪದೇ ಪದೇ ಕ್ಷಾಮಕ್ಕೆ ತುತ್ತಾಗುತ್ತಿರುವುದು ಸರ್ಕಾರಕ್ಕೆ ಗೊತ್ತಾಗಿದೆ. ಅದಕ್ಕಾಗಿ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಯೋಜನೆಯನ್ನು ಮಾಡುತ್ತಿದ್ದೇವೆ.

ಶ್ರೀ ಬಿ. ಪಿ. ಗಂಗಾಧರ್.—ಆಂಧ್ರಪ್ರದೇಶ ಸರ್ಕಾರದಿಂದ ಯೋಜನೆಯ ವಿವರಗಳು ಬಂದಿವೆ ಎಂದು ಹೇಳಿದರು. ಅದರ ಒಂದು ಕಾಪಿಯನ್ನು ಕೊಡಲಾಗುವುದೇ ?

ಶ್ರೀ ಬಿ. ಎಲ್. ಗೌಡ.—ಈಗತಾನೇ ಒಂದು ಕಾಪಿ ಬಂದಿದೆ. ಮಾನ್ಯ ಸ್ನೇಹಿತರಿಗೆ ಬೇಕಾದರೆ ಕೊಡುತ್ತೇನೆ.

Mr. SPEAKER.—The Hon. Minister may place it on the Table of the House.

ಶ್ರೀ ಎಚ್. ಬಿ. ಜ್ಯಾಲನಯ್ಯ.—ಕೋರಾರ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಒಂದು ತುರ್ತು ಯೋಜನೆಯನ್ನು ಮಾಡತಕ್ಕ ಕಾಲದಲ್ಲಿ, ಇಡೀ ರಾಜ್ಯದಲ್ಲಿ ಕ್ಷಾಮಕ್ಕೆ ಅನೇಕ ಜಿಲ್ಲೆಗಳು ತುತ್ತಾಗುತ್ತಿವೆ, ಆದರಲ್ಲಿ ಹಾಸನ ಜಿಲ್ಲೆಯೂ ಒಂದು. ಆದ್ದರಿಂದ ಕ್ಷಾಮದ ದವಡೆಗೆ ಸಿಕ್ಕುವಂಥ ಪ್ರದೇಶಗಳಿಗೆಲ್ಲಾ ಶಾಶ್ವತ ಪರಿಹಾರವನ್ನು ದೊರಕಿಸಿಕೊಡುವಂಥ ಒಂದು ಯೋಜನೆಯನ್ನು ಸರ್ಕಾರ ವೇನಾದರೂ ಇಟ್ಟುಕೊಂಡಿದೆಯೇ ?

ಶ್ರೀ ಬಿ. ಎಲ್. ಗೌಡ.—ಅಂಥ ಒಂದು ಯೋಜನೆಯನ್ನು ತಯಾರು ಮಾಡಿದ್ದೇವೆ. ಪ್ರಾಯೋಗಿಕವಾಗಿ ಬಿಜಾಪುರ ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳನ್ನು ತೆಗೆದು ಕೊಂಡಿದ್ದೇವೆ.

Employment of Scheduled Castes and Scheduled Tribes people in Janata Bazaar, Bijapur

18. Sri S. S. ARAKERI (Balloli).—

Will the Minister for Development be pleased to state :—

(*a*) the total number of persons employed in Janata Bazaar, Bijapur ;

(*b*) of them, the number of clerks and sales girls ; and the number belonging to Scheduled Castes and Scheduled Tribes ;

(*c*) whether it has come to the notice of Government that the number of employees of Scheduled Castes and Scheduled Tribes is not 18 per cent of the total number of employees in the Janata Bazaar ;

(*d*) if so, the steps that Government propose to take to adhere to the reservation of 18 per cent of Scheduled Castes and Scheduled Tribes there ?

Sri P. M. NADGOUDA (Minister for Development).—

(*a*) 28.

(*b*) 6 clerks and 9 sales girls. None of them belongs to Scheduled Castes and Scheduled Tribes.

(*c*) Yes.

(*d*) Necessary steps are being taken for the reservation in favour of persons belonging to Scheduled Castes and Scheduled Tribes for appointments in the Janata Bazaar, Bijapur.

ಶ್ರೀ ಎಸ್. ಎಸ್. ಅರಕೇರಿ.—ಬಿಜಾಪುರದ ಜನತಾ ಬಜಾರಿನಲ್ಲಿ ಕೆಲಸ ಮಾಡುತ್ತಿರುವ 28 ಮಂದಿಯಲ್ಲಿ ಅನುಸೂಚಿತ ಜಾತಿಯವರು ಮತ್ತು ಅನುಸೂಚಿತ ಆದಿಮ ಜಾತಿಗಳವರು ಒಬ್ಬರೂ ಇಲ್ಲದಿರುವುದಕ್ಕೆ ತಮ್ಮ ಉದಾಸೀನವೇ ಕಾರಣವಲ್ಲವೇ ?

ಶ್ರೀ ಪಿ. ಎಂ. ನಾಡಗೌಡ.—ಇದುವರೆಗೆ ನಿರ್ಬಂಧ ಮಾಡಲು ಅವಕಾಶವಿರಲಿಲ್ಲ. ಅವು ಸೆಲ್ಫ್ ಡಿಟರ್ಮಿನಿಂಗ್ ಬಾಡೀಸ್. ಈಗ ಸರಕಾರ ಕಾನೂನಿನಲ್ಲಿ ಸೂಕ್ತ ತಿದ್ದುಪಡಿಮಾಡಿ ನಿರ್ಬಂಧಮಾಡಲು ಅವಕಾಶಮಾಡುತ್ತಿದೆ.